

ರಂಗುರಂಗಿನ, ವಿನೂತನ ಮಾದರಿಯ ಉಡುಪು ಎಲ್ಲ ವಯೋಮಾನದವರಿಗೂ ಇಷ್ಟ. ನಾಮಕರಣ, ನಿಶ್ಚಿತಾರ್ಥ, ಹುಟ್ಟುಹಬ್ಬ, ಪಾರ್ಟಿ, ಸಾವು, ಕಾಲೇಜ್ ಡೇ, ಫೇರ್‌ವೆಲ್ ಪಾರ್ಟಿ, ಕಾನ್ವೊಕೇಶನ್, ಮದುವೆ, ವಿದೇಶ ಪ್ರಯಾಣ, ಎಥ್ನಿಕ್ ಡೇ, ಪಾರಂಪರಿಕ ಹಬ್ಬ, ಮುಂಜಿ, ಸಾಂಸ್ಕೃತಿಕ ಕಾರ್ಯಕ್ರಮ, ಫ್ಯಾಷನ್ ಶೋ – ಹೀಗೆ ಸಂದರ್ಭ ಏನೇ ಇರಲಿ, ಹೊಸ ಉಡುಪು ಬೇಕೇ ಬೇಕು. ಅದು ಬ್ರ್ಯಾಂಡೆಡ್ ಆಗಿದ್ದರಂತೂ ಹೇಳತೀರದ ಗತ್ತು ಮತ್ತು ಖುಷಿ. ಕೊಳ್ಳುವವರ, ತೊಡುವವರ, ಕೊಡಿಸುವವರ ಶಕ್ತ್ಯಾನುಸಾರ ಅಂಗಡಿ, ಮಾಲ್ ಮತ್ತು ಆನ್‌ಲೈನ್ ಮಾರಾಟ ಮಳಿಗೆಗಳಿಂದ ವಿವಿಧ ಬ್ರ್ಯಾಂಡ್‌ಗಳ ರಾಶಿ ರಾಶಿ ಬಟ್ಟೆಗಳು ನಮ್ಮ ವಾರ್ಡ್‌ರೋಬ್ ಮತ್ತು ಸೂಟ್‌ಕೇಸ್‌ನಲ್ಲಿ ಜಾಗ ಪಡೆಯುತ್ತವೆ. ಜನಪ್ರಿಯ ಸಿನಿಮಾ ನಟನಟಿಯರು, ನೆಚ್ಚಿನ ಆಟಗಾರ, ರಾಷ್ಟ್ರೀಯ ನಾಯಕ, ಫ್ಯಾಷನ್ ಲೋಕದ ತಾರೆಯರು ಧರಿಸಿ ಮಿಂಚುವ ಉಡುಪು ಪರಿಕರಗಳಿಗಂತೂ ಭಾರೀ ಬೇಡಿಕೆ. ಶ್ರೀಮಂತ ಉದ್ಯಮಿ ಕುಟುಂಬಗಳ ನಡುವಿನ ಮದುವೆಗೆ ಬಳಸುವ ವಧುವರರ ಡಿಸೈನರ್ ಉಡುಪುಗಳ ಬೆಲೆ ಕೋಟಿಗಳಲ್ಲಿರುತ್ತದೆ. ನಿತ್ಯನೂತನರಾಗಿ, ಚಿರಯೌವನಿಗರಾಗಿ ಕಾಣಬಯಸುವವರಿಗಾಗಿಯೇ ಹತ್ತು ಹಲವು ವಿನೂತನ ಫ್ಯಾಷನ್ ಟ್ರೆಂಡ್‌ಗಳು



## ರೀ ಸೈಕ್ಲಿಂಗ್ VS ಅಪ್ ಸೈಕ್ಲಿಂಗ್

ಮಾರುಕಟ್ಟೆ ಪ್ರವೇಶಿಸಿ ಗ್ರಾಹಕರ ಕೈ ಸೇರಿ, ಬಳಕೆಯಾದ ನಂತರ ತ್ಯಜಿಸಲಾಗುವ ಎಲ್ಲ ಬಟ್ಟೆಗಳನ್ನು ರೀ ಸೈಕಲ್ ಮಾಡಲಾಗುವುದಿಲ್ಲ. ಅದರ ಪ್ರಮಾಣ ಕೇವಲ ಶೇ 1ರಷ್ಟಿದೆ. ಬಳಸಿದ ಬಟ್ಟೆಯನ್ನು ಅಲ್ಪ ಸ್ವಲ್ಪ ನವೀಕರಿಸಿ, ವಿನ್ಯಾಸ ಬದಲಿಸಿ ಮರು ಮಾರಾಟ ಮಾಡುವುದನ್ನು ಅಪ್ ಸೈಕ್ಲಿಂಗ್ ಎನ್ನುತ್ತಾರೆ. ಹೀಗೆ ಮಾಡುವುದರಿಂದ ಕಚ್ಚಾವಸ್ತುಗಳ ಮೇಲಿನ ಅವಲಂಬನೆ ಗಣನೀಯವಾಗಿ ಕಡಿಮೆಯಾಗುವುದಲ್ಲದೆ ಹೊಸದಾಗಿ ಉತ್ಪಾದನೆ ಮಾಡುವ ಪ್ರಮೇಯವೂ ಇರುವುದಿಲ್ಲ. ವಿಶ್ವದ ಅನೇಕ ವಸ್ತ್ರ ತಯಾರಿಕಾ ಕಂಪನಿಗಳು ಈ ಕ್ರಮವನ್ನು ಪರಿಸರಸ್ನೇಹಿ ಎಂದಿವೆ.

ರೀ ಸೈಕಲ್ ಆದಾಗ ವಸ್ತ್ರದ ಗುಣಮಟ್ಟ ಸಂಪೂರ್ಣ ಬದಲಾಗುತ್ತದೆ. ಆದರೆ ಅಪ್‌ಸೈಕ್ಲಿಂಗ್‌ನಲ್ಲಿ ಬಳಸಿದ ನೂಲಿನ ಗುಣ ಹಾಗೆಯೇ ಮುಂದುವರೆಯುತ್ತದೆ, ಬಳಸಲು ಆಕರ್ಷಕವಾಗಿಯೂ ಇರುತ್ತದೆ. ಸ್ವೀಡನ್ ಮೂಲದ 'ಹೆಚ್ ಅಂಡ್ ಎಂ ಕಂಪನಿ' ಮುಂದಿನ ದಿನಗಳಲ್ಲಿ ಹತ್ತಿ ದೊರೆಯುವ ಪ್ರಮಾಣ ಕಡಿಮೆಯಾಗುವುದರಿಂದ ಅಪ್ ಸೈಕ್ಲಿಂಗ್, ರೀ ಸೈಕ್ಲಿಂಗ್ ಮಾಡದೇ ಬೇರೆ ದಾರಿಯಿಲ್ಲ ಎಂದಿದೆ.